ಒಂದಾಣೆ ಮಾಲೆ **219**

ಮುದ್ದಣ-ಮನೋರಮೆ

*

ಲೇಖಕರು:

ಶ್ರೀ। ಬಿ. ಪದ್ಮನಾಭ ಸೋಮಯಾಜಿ,

ಸುರತ್ಕಲ್.

*

1959

ಬೆಲೆ: ಆಣೆ ಒಂದು.

ಒಂದಾಣೆ ಮಾಲೆ, ಮಂಗಳೂರು.

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯು ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸೆಪ್ಟಂಬರದಿಂದ 1959ನೇ ಜನವರಿ ತಿಂಗಳ ಮೂರನೆಯ ವಾರದ ವರೆಗೆ 219 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕವು ಹೊರಡುತ್ತಲೇ ಇದೆ.

219 ಅಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 4346 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆ ಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ 'ಒಂದಾಣೆ ಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂಧಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

ಮುದ್ದಣ-ಮನೋರಮೆ

['ಮುದ್ದಣ' ಎಂಬುದು ಕಾವ್ಯನಾಮ. ಅವನ ನಿಜವಾದ ಹೆಸರು ಲಕ್ಷ್ಮೀನಾರಾಯಣ. ಉಡುಪಿಯ ಸಮೀಪದ ನಂದಳಿಕೆಯು ಅವನ ಜನ್ಮಧಾಮ. ಆಧುನಿಕ ಗದ್ಯ ಶೈಲಿಗೆ ಬೀಜವನ್ನು ಬಿತ್ತಿದವನೆಂದರೆ ನಮ್ಮ ಮುದ್ದಣ. ಸರಸ ಸಂಭಾಷಣೆಯ ರೂಪದಲ್ಲಿದ್ದ ಅವನ ರಾಮಾಶ್ವಮೇಧವೆಂಬ ಗ್ರಂಥಕ್ಕೆ ಮರುಳಾಗದ ಕನ್ನಡಿಗನಿಲ್ಲ. ರಾಮಾಶ್ವಮೇಧವೆಂಬ ಸುವರ್ಣಮಂದಿರಕ್ಕೆ ರನ್ನದ ಕಳಸದಂತಿದೆ ಮುದ್ದಣ—ಮನೋರಮೆಯರ ಸಂಭಾಷಣೆ.]

ಅದೊಂದು ಮಳೆಗಾಲದ ದುರ್ದಿನ. ವರ್ಷಾಕಾಲದ ಮಿಂಚು ಮೋಡಗಳಿಂದ ಆಗಸವೆಲ್ಲ ತುಂಬಿಕೊಂಡಿತ್ತು. ಬೈಗಿನ ಸಮಯದಲ್ಲಿ ಕವಿವರ್ಯನಾದ ಮುದ್ದಣನು ಓಲಗ ಮುಗಿಸಿಕೊಂಡು ಅರಮನೆಯಿಂದ ಹೊರಟನು. ರಾಜಬೀದಿಗೆ ಬಂದು ತನ್ನ ಮನೆಯತ್ತ ಸಾಗುತಿದ್ದನು.

ಮಡದಿ ಮನೋರಮೆ ಹೊರಬಾಗಿಲಲ್ಲೇ ತನ್ನ ಪತಿಯನ್ನು ಆದರದಿಂದ ಸ್ವಾಗತಿಸಿದಳು. ತನಿವಣ್ಗಳ ತಟ್ಟೆಯನ್ನು ಮುಂದಿಟ್ಟು ಕೆನೆಹಾಲನ್ನು ಕುಡಿಯಲಿತ್ತಳು.

ಮಡದಿಯ ಮಧುರೋಪಚಾರದಿಂದ ಮುದ್ದಣನ ಹಸಿವು ಕಳೆಯಿತು. ಓಲಗದ ಆಯಾಸ ಹಿಂಗಿತು. ಮುಖದಲ್ಲಿ ಆನಂದದ ಮಿನುಗು ಮಿಂಚಿತು. ಕಣ್ಣು ಕಾಂತಿಯಿಂದ ಕೂಡಿತು. ಆಗ ಮನೋರಮೆಯು:

"ನೋಡಿದರೇಕೋ ಈ ಹಗಲು ಇನ್ನಷ್ಟು ಹಿರಿದಾಗುತ್ತ ಬರುತ್ತಿದೆ. ಹಗಲಿರುಳೂ ಸುರಿವ ಮಳೆಯಿಂದಾಗಿ ಮನಸ್ಸೇಕೋ ಬೇಸರಗೊಂಡಿದೆ. ಏನಾದರೂ ಒಂದು ಚಂದದ ಕಥೆಯನ್ನಾದರೂ ಹೇಳಬಾರದೇ?" ಎಂದಳು.

ಮುದ್ದಣ: ಪ್ರಾಣೇಶ್ವರಿ! ಅದಕ್ಕೇನು ತಡೆ? ಇಂತಹ ಬಯಕೆ ತಲೆದೋರಿತೆಂದಾದರೆ ಪೂರ್ಣಗೊಳಿಸುವುದು ದೊಡ್ಡದೆ? ಆದರೆ ಅವ ನಲ್ಗತೆಯನ್ನು ಹೇಳಲಿ? ಭೋಜ ಪ್ರಬಂಧವೆ? ವಿಕ್ರಮ ವಿಜಯವೆ? ಅಥವಾ ಮಹಾವೀರ ಚರಿತೆಯೆ?

ಮನೋ: ಇಸ್ಸಿ! ಈ ಕಥೆಗಳಲ್ಲೆಲ್ಲಾ ಬಯಕೆಯೇನು? ಹೊಸ ದಾರಿ ತೋರುವ ರಸಭರಿತ ಚರಿತೆಯುಳ್ಳ ಕಥೆಯಲ್ಲೇ ನನಗಳ್ತಿ.

ಮು: ಹಾಗಾದರೆ ನಿನಗಾವ ರಸದಲ್ಲಿ ಪ್ರೀ... ಶೃಂಗಾರದಲ್ಲೆ? ವೀರ ರಸದಲ್ಲೆ? ಅಥವಾ ಹಾಸ್ಯರಸದಲ್ಲೆ!

ಮನೋ: ಆವ ರಸದಲ್ಲೆಂದರೇನು? ನವರಸದಲ್ಲಿಯೂ........

ಮು: ಅಂತಾದರೆ ನಿನಗೊಪ್ಪುವ ಕಥೆ ಯಾವುದೋ?....

ಮನೋ: ರಾಮಾಯಣದಲ್ಲೇನಾದರೂ ಒಂದು ಕಥೆ.

ಮು: ಸೀತಾ ಸ್ವಯಂವರದ ಕಥೆಯನ್ನುಸುರುವೆ. ಆಗದೆ?

ಮನೋ: ಮೊದಲೇ ಅದನ್ನು ಕೇಳಿರುವೆನಪ್ಪೆ!

ಮು: ಹಾಗಾದರೆ, ಸೀತಾಪಹರಣದ ಕಥೆಯಲ್ಲಿ ಬಯಕೆಯೇನು?

ಮನೋ: ಉ! ನಾನೊಲ್ಲೆನಪ್ಪ ಆ ಕಥೆಯನ್ನು!

ಮು: ಮುಂದಿನ್ನಾವ ಕಥೆಯನ್ನುಸುರಲಿ?

ಮನೋ: ನಮ್ಮ ನಾಡಿನಲ್ಲಿ ಎಷ್ಟೋ ರಾಮಾಯಣಗಳಿಲ್ಲವೆ? ಅವು ಗಳಿಲ್ಲವೆ? ಅವುಗಳಲ್ಲಿ ಒಂದನ್ನು ಆರಿಸಿಕೊಂಡು ಹೇಳುವುದು.

ಮು: ನೀನೇ ಒಂದನ್ನಾಯ್ದುಕೊಂಡು ತಿಳಿಸಿದರೊಳಿತಲ್ಲವೆ?

ಮನೋ: ಶ್ರೀ ರಾಮನು ಅಶ್ವಮೇಧವನ್ನು ಕಯ್ಕೊಂಡನೆಂದು ಹೇಳುವರಪ್ಪೆ! ಆ ಕತೆಯೇ ಆಗಬಹುದಲ್ಲ!

ಮು: ತಿಳಿಯಿತು. ಶೇಷರಾಮಾಯಣವನ್ನು ಕೇಳುವ ಬಯಕೆ!

ಮನೋ: ಅಹುದು! ಆದರೆ ಮೊದಲಿನದನ್ನು ಹೇಳಿದವರಾರು?

ಮು: ಮೊದಲು ಶೇಷನು ವಾತ್ಸ್ಯಾಯನನಿಗೆ ಹೇಳಿದ ಕಥೆಯನ್ನೇ ವಿಸ್ತರಿಸಿ ಹೇಳುವೆನು. ಆದರೆ ಬಹಳ ದೊಡ್ಡ ಕಥೆಯಪ್ಪೆ! ಒಂದೆರಡು ದಿನಗಳಲ್ಲಿ ಮುಗಿಯದು

ಮನೋ: ಆಗಲಿ! ಪ್ರತಿದಿನ ಅಲ್ಪಸ್ವಲ್ಪ ಹೇಳಿದರಾಯಿತು.

ಮು: ಸರಿ, ಅಂತಾದೊಡೆ. ಪ್ರಕೃತ ಆವ ಧಾಟಿಯಲ್ಲಿ ಹೇಳಲಿ? ಪದ್ಯದಲ್ಲೇ? ಅಥವಾ ಗದ್ಯದಲ್ಲೇ?

ಮನೋ: ಛೀ! ಪದ್ಯವು ವಧ್ಯ! ಗದ್ಯವೇ ಹೃದ್ಯ!

ಮು: ಅದಂತಿರಲಿ, ಇಂತಹ ನಲ್ಗತೆಯನ್ನು ಅಂದವಾಗಿ ಹೇಳಿದುದೇ ಆದರೆ ಅರಮನೆಯಲ್ಲಿ ರತ್ನದ ಕಡಗವನ್ನೋ ಚಿನ್ನದ ಸರವನ್ನೋ ಬಹುಮಾನವಾಗಿ ಕೊಡುವರು. ನೀನೇನನ್ನು ಕೊಡುವೆ?

ಮನೋ: ಬೇರೇನನ್ನು ಕೊಡಲಿ! ನನ್ನನ್ನೇ ಒಪ್ಪಿಸುವೆ.

ಮು: ಚೆನ್ನಾಯ್ತು! ಬಲ್ಗಡಸುಗಾರ್ತಿ! ಮೊದಲೇ ನಿನ್ನ ತಂದೆ ತಾಯಿಗಳು ನನಗೆ ಕೊಟ್ಟಿರುವರೆಂಬುದನ್ನು ಮರೆತೇ ಬಿಟ್ಟೆಯೇನು?

ಮನೋ: ಹೋಗಲಿ, ಬಿಡಿ. ಹೇಗಾದರೂ ನಾನು ಪರಾಧೀನೆಯಷ್ಟೆ; ಪುರಾಣವನ್ನೋದಿದ ಬಳಿಕಲ್ಲವೆ ದಕ್ಷಿಣೆಯನ್ನೀವುದು! ಅರಮನೆಯವರಾದರೂ ಕಾವ್ಯವನ್ನು ಕಂಡಮೇಲಲ್ಲವೆ ಬಹುಮಾನವನ್ನೀವರು? ಅಂತೆಯೇ ಕತೆಯನ್ನೆಲ್ಲಾ ಕೇಳಿದ ಮೇಲೆ ಸೊಗಸಾಗಿದೆ ಎಂದು ಕಂಡು ಬಂದರೆ ಆಗ ತೋರಿದಂತೆ ಸನ್ಮಾನಿಸುವ.

ಮು: ಒಳ್ಳಿತೊಳ್ಳಿತು; ಆದರೆ, ಕತೆಯನ್ನಾಲಿಸಿ, ಲಾಲಿಸಿ, ಆ ಮೇಲೆ ಮಾತ್ರ ಕೊಡಲಾರೆ ಎಂದೊಡೆ ಬಿಡಲಾರೆ.

ಮನೋ: ಕತೆಯ ತಿರುಳು ಎಂತಿಹುದೆಂದು ನಾನೂ ನೋಡುವೆ.

ಮು: ಹಾಗಾದರೆ ಆಲಿಸು— ಸ್ವಸ್ತಿ ಶ್ರೀಮತ್ ಸುರಾಸುರೇಂದ್ರ ನರೇಂದ್ರ ಮುನೀಂದ್ರ ಫಣೀಂದ್ರ ಮಣಿ ಮುಕುಟತಟಘಟಿತ........

ಮನೋ: ಓ! ಓ! ಸೈರಿಸು, ಸೈರಿಸು. ವಸುಧೆಗೊಡೆಯನಾದ ರಾಮಚಂದ್ರನ ಕಥೆಯನ್ನು ಹೇಳೆಂದರೆ ಬಸದಿಗೊಡೆಯನಾದ ಸುರೇಂದ್ರನ ಚರಿತೆಯನ್ನು ಹೇಳುವುದೇ? ಇಂತಹ ಬಗೆಗೊಳ್ಪ ಕಥೆಗೆ ಎಂತು ಉಡುಗೊರೆಯನ್ನೀಯಲೋ?

ಮು: ರಮಣಿ! ನಲ್ಮೆಯ ಶೈಲಿಯಿದು! ಕಚದಾಣೆ ಸತ್ಯ! ರಾಮಚಂದ್ರನ ಕಥೆಯನ್ನೇ ವರ್ಣನೆಮಾಡಿ ನುಡಿವುದು ಸಂಸ್ಕೃತದೊಂದು ಸೊಗಸು.

ಮನೋ: ಲೇಸು! ಲೇಸು! ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿಸಿದಂತಾಯಿತು. ಕನ್ನಡದ ತಿರುಳನ್ನೇ ತಿಳಿಯಲು ಸಮರ್ಥಳಿಲ್ಲ; ಸಂಸ್ಕೃತದ ಸೊಗಸನ್ನು ತಿಳಿಸುವುದೆ?

ಮು: ಅಂತಾದರೆ ನಾನೆಂತು ಹೇಳಲೆ?

ಮನೋ: ತಿರುಳ್ಗನ್ನಡದ ಒಳ್ನುಡಿಯಲ್ಲಿ. ಕನ್ನಡ ಕಸ್ತೂರಿಯಲ್ತೆ?

ಮು: ಅಂತಾದರೆ, ಕರ್ವಣಿ ಸರದಲ್ಲಿ ಕೆಂಪು ಹವಳ ಪೋಣಿಸಿದಂತೆ ಎಡೆಎಡೆಯಲ್ಲಿ ಸಂಸ್ಕೃತದ ನಲ್ನುಡಿಸೇರಿರಲು ರಸವೊಸರುವಂತೆ ತಿರುಳ್ಗನ್ನಡದಲ್ಲಿ ನುಡಿವೆನು. ಕೇಳೆಲೆ ಬಾಲೆ! ಬಾಲೇಂದುಫಾಲೆ! ಈ ಪೊಡವಿಯಲ್ಲಿ ದೇವತೆಗಳ ಆಡುಂಬೊಲದಂತಿರುವ ಮೇರುಶಿಖರದ ತೆಂಕಬದಿಯಲ್ಲಿ ಭೂದೇವಿ

ಯು ಸೀಮಂತರತ್ನವೊ ಎಂಬಂತೆ ಅಯೋಧ್ಯಾನಗರವಿದೆ. ಅಲ್ಲಿದ್ದ ಸೂರ್ಯ ವಂಶದ ದಶರಥ ಮಹಾರಾಜನಿಗೆ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ನಾಲ್ವರು ಕುಮಾರರುದಿಸಿದರು. ಅವರಲ್ಲಿ ಹಿರಿಯವನಾದ ಶ್ರೀರಾಮನಿಗೆ ಪಟ್ಟಾಭಿಷೇಕವಾಗಲು ಅವನು ಸುಖದಿಂದ ರಾಜ್ಯವಾಳಲು ತೊಡಗಿದನು. ಮನೋಹರೆ ಮನೋರಮೆ! ಎರಡು ಸಾವಿರ ನಾಲಗೆಗಳಿದ್ದರೂ ಮಹಾಶೇಷನಿಂದ ಶ್ರೀರಾಮನಾಳಿಕೆಯನ್ನು ವರ್ಣಿಸಲು ಸಾಧ್ಯವಾಗಲಿಲ್ಲೆಂದಾಗ ಹಳ್ಳಿಯ ಕೊಂಪೆಯವನಾದ ನನ್ನಿಂದ ಸಾಧ್ಯವೆ? ಅಂತು ಶ್ರೀರಾಮನು ಅರಸುಗೈಯುತ್ತಿರಲು ಅಗಸ್ತ್ಯಋಷಿಯು ನಿಜಶಿಷ್ಯರೊಂದಿಗೆ ಬಂದು,ರಾವಣನನ್ನು ಕೊಂದ ಬ್ರಹ್ಮಹತ್ಯಾದೋಷದ ಪರಿಹಾರಾರ್ಥವಾಗಿ ಅಶ್ವಮೇಧವೆಂಬ ಮಹಾಯಾಗವನ್ನು ಕೈಕೊಳ್ಳೆಂದು ಹೇಳಲು ಶ್ರೀರಾಮನಿಗೆ ಆ ಉಪದೇಶ ಒಪ್ಪಿತು. ವಸಿಷ್ಠರಿಗೂ ಯೋಗ್ಯವೆನಿಸಿತು. ಅಂತೆಯೇ ಸರಯೂ ನದೀತೀರದಲ್ಲಿ ಯಾಗ ಮಂಟಪವನ್ನು ರಚಿಸಿ ಚಿನ್ನದ ಸೀತೆಯೊಂದಿಗೆ ಯಾಗದೀಕ್ಷಾಬದ್ಧನಾದನು.

ಮನೋ: ರಮಣ! ಇದೇನು? ಚಿನ್ನದ ಸೀತೆಯೆನ್ನುವೆ? ರನ್ನದ ಸೀತೆ ಎತ್ತ ಹೋದಳು? ತಂದೆ ಜನಕ ಮಹಾರಾಜನು ಕರೆದುಕೊಂಡು ಹೋಗಿದ್ದರೆ ಯಾಗಕ್ಕೆಂದು ಕರೆಯಿಸಿಕೊಳ್ಳಬೇಕಿತ್ತಲ್ಲವೆ?

ಮು: ಓ! ಈ ವಿಚಾರವನ್ನು ತಿಳಿಸಲು ಮರೆತಿದ್ದೆ; ಸಂದೇಹ ಸಹಜ. ಕೇಳು: ಶ್ರೀ ರಾಘವನು ರಾವಣಾದಿಗಳನ್ನು ಸಂಹರಿಸಿ, ಲಂಕಾಧಿಪತ್ಯವನ್ನು ವಿಭೀಷಣನಿಗೊಪ್ಪಿಸಿ ಸೀತಾಸಮೇತನಾಗಿ ಅಯೋಧ್ಯೆಗೆ ಬಂದು ಅರಸುಗೈಯುತ್ತಿರಲು, ಪ್ರಾಣೇಶ್ವರಿ! ಬಹಳ ಕಾಲ ಕಳೆದಮೇಲೆ ಸೀತೆ ಗರ್ಭಿಣಿಯಾದಳು. ನಾಡೆಲ್ಲ ಸಂತಸದ ಕಡಲಲ್ಲಿ ಓಡಾಡತೊಡಗಿತು. ಪ್ರಾಣ ನಾಯಿಕೆ! ಒಮ್ಮೆ ಗಾಂಪನಾದ ಅಗಸನು, ಸಿಟ್ಟಿನಿಂದ ತವರಿಗೆ ಹೋದ ಹೆಂಡತಿಯನ್ನು ಅವಳ ತಂದೆತಾಯಿಗಳು ಕರೆತರಲು — ಅಗಲಿದ್ದ ಮಡದಿಯನ್ನು 'ರಘುಜನಂತೆ ಕೊಂಡು ಆಳೆನು,ಬಾಳೆನು' ಎಂದು ಕಹಿನುಡಿದನು. ಇದನ್ನು ಬೇಹುಗಾರರು ತಿಳಿಸಲು, ರಜಕನ ನಿಷ್ಠುರೋಕ್ತಿಯಿಂದ ಬೆಂದ ಶ್ರೀರಾಮನು 'ಸೀತೆಯನ್ನು ಅಡವಿಯಲ್ಲಿ ಉಳಿದು ಬಾ' ಎಂದು ಲಕ್ಷ್ಮಣನಿಗೆ ಕಟ್ಟಪ್ಪಣೆಯನ್ನಿತ್ತನು. ಎನ್ನ ರನ್ನ ಕಯ್ಪಿಡಿ, ಮೋಹನಾಂಗಿ! ಅಣ್ಣನ ಆಣತಿಯನ್ನು ಮೀರಲಾರದ ಲಕ್ಷ್ಮಣನು, ಮುನಿಪತ್ನಿಯರನ್ನು ಕಾಂಬ ಬಯಕೆಯುಳ್ಳ ಗರ್ಭಿಣಿಯಾದ ಸೀತೆಯನ್ನು ರಥದಲ್ಲಿ ಕುಳ್ಳಿರಿಸಿ, ಗಂಗಾನದಿಯನ್ನು ದಾಟಿ, ದೂರ

ಹೋಗಿ ಅಣ್ಣನ ಅಪ್ಪಣೆಯನ್ನು ತಿಳಿಸಿದೊಡನೆಯೇ ಬಿರುಗಾಳಿಯ ಹೊಡೆತಕ್ಕೆ ಮುರಿದು ಬೀಳುವ ಕರ್ಪೂರಬಾಳೆಯಂತೆ ಸೀತೆ ಧೊಪ್ಪನೆ ನೆಲದಲ್ಲಿ ಬಿದ್ದು ಮೂರ್ಛೆಹೋದಳು.

ಮನೋ: (ಕಣ್ಣೀರು ಸುರಿಸಿ) ಆ! ಎನ್ನೊಡೆಯ! ನೀನೂ ಅದೆಂತು ಕಲ್ಲು ಮನಸ್ಸಿನವನಾದೆಯೋ? ಒಂದೆಡೆಯಲ್ಲಿ ದೇವಿಯನು ಗೊಂಡಾರಣ್ಯದಲ್ಲಿ ಬಿಟ್ಟು ಹೋಗಲು ಮೈದುನನಿಗಾದರೂ ಅದೆಂತು ಮನಸ್ಸು ಬಂತೊ? ಸೀತೆ ಏನೆಂದು ಹಲುಬಿದಳೊ? ಅಕ್ಕಟಾ! ಹೆಣ್ಣುಗಳ ಜೀವನವೆಂಬುದು ಜೀವನವೆ? ಸೀತೆ ಏನಾದಳೊ? ಹೆಣ್ಣೊಡಲಲ್ಲವೆ? ಎಂತು ಸೈರಿಸಲಿ?

ಮು: (ತನ್ನ ಕಣ್ಣೀರನ್ನು ಒರಸಿಕೊಳ್ಳುತ್ತ) ಪ್ರಾಣೇಶ್ವರ! ಈ ಸ್ಥಿತಿಯನ್ನೆಂತು ಹೇಳಲಿ? ಗಂಟಲು ಕಟ್ಟಿದಂತಾಗುವುದು. ಮುಂದಿನ ಕಥೆಯನ್ನು ಕೇಳು. ಅತ್ತಲು ಅಯೋಧ್ಯೆಯಲ್ಲಿ ಯಜ್ಞದ ಕುದುರೆಯನ್ನು....

ಮನೋ: ಸುಡು, ಸುಡು ನಿನ್ನ ಕುದುರೆಯನ್ನು! ಸೀತೆಯೇನಾದಳು? ಅದೆಲ್ಲವನ್ನೂ ಮೊದಲು ಹೇಳು.

ಮು: ಸುಂದರಿ! ಅಂತು ಮೂರ್ಛೆ ಬಿದ್ದಿದ್ದ ಸೀತೆಯನ್ನು ಕಂಡು ಲಕ್ಷ್ಮಣನು, ಹತ್ತಿರದಲ್ಲೇ ಹರಿಯುವ ಅರ್ಬಿಯ ನೀರನ್ನು ತಂದು ಕಡೆಗಾಲದ ಸೇವೆಯೆಂದು ಉಪಚರಿಸಲು ಸೀತೆಯು ಮೆಲ್ಲನೆ ಕಣ್ದೆರೆದು ಪರಿಪರಿಯಿಂದ ಅತ್ತಳು. ಕಟ್ಟಕಡೆಗೆ ನಿರುಪಾಯನಾದ ಲಕ್ಷ್ಮಣನು ವನದೇವತೆಗಳಿಗೂ ದಿಕ್ಪತಿಗಳಿಗೂ ವಂದಿಸಿ,ಸೀತೆಯನ್ನು ಕಾಪಾಡಬೇಕೆಂದು ಪ್ರಾರ್ಥಿಸಿ ಹೋಗಲಾರದ ಮನದಿಂದ ಎಂತೋ ಹಿಂದೆ ನಡೆದನು. ನಿರ್ಗತಿಕಳಾದ ಸೀತೆಯೂ ಕಲ್ಮರಗಳೂ ಕರಗುವಂತೆ ದುಃಖಿಸುತ್ತಿರಲು ವೇದಪುರುಷನೇ ಮನುಷ್ಯಾಕೃತಿಯನ್ನು ತಾಳಿ ಬಂದನೊ ಎಂಬಂತೆ ವಾಲ್ಮೀಕಿ ಮಹರ್ಷಿಯು ಬರುತ್ತ, ಆ ಪರಿ ದುಃಖಿಸುತ್ತಿದ್ದ ಸೀತೆಯನ್ನು ಕಂಡುವ–ನದೇವಿಯಂತಿರುವ ನೀನಾರು ಮಗಳೇ? ಶ್ರೀರಾಮನಾಣೆಯಾಗಿಯೂ ನಾನು ವಾಲ್ಮೀಕಿಯು, ಎನ್ನಲು ಸೀತೆಯು ಆ ಮುನಿಯ ಕಾಲಿಗೆ ಬಿದ್ದಳು. 'ರಾಘವನಾಣೆಯಾಗಿಯೂ ನಿನ್ನನ್ನು ಮಗಳಂತೆ ಕಾಪಾಡುವೆನು' ಎಂದು ಹೇಳುತ್ತ ಅವಳನ್ನು ಸಮಾಧಾನಗೊಳಿಸಿ ಬಡವನು ಭಾಗ್ಯಲಕ್ಷ್ಮಿಯನ್ನು ಕೊಂಡೊಯ್ಯುವಂತೆ ತನ್ನಾಶ್ರಮಕ್ಕೆ ಕೊಂಡೊಯ್ದನು. ಓ ಎನ್ನ ಕೊಂಡಾಟದ ಮೆಚ್ಚುಗಾರ್ತಿ! ಮೂಗೊಂಕು, ಮೂಗೆರೆಯ ಗುಜ್ಜುಗೊರಲ ತರಳೆ! ಇಂತು ಸೀತೆ ವಾಲ್ಮೀ

ಕಿಯ ಪುಣ್ಯಾಶ್ರಮದಲ್ಲಿರುತ್ತಿರಲು ಅತ್ತ [illegible] ನಗರದೊಳ್ ಸೀತಾ ರಾಮನು........

ಮನೋ: ನಲ್ಲ! ಏನು ಮಾತೋ? ಸೀತೆಯನ್ನು ಕಾಡಿಗಟ್ಟಿದ ಮೇಲೆ ಅವನೆಂತಹ ಸೀತಾರಾಮ? ಅವನಿಗಿನ್ನೆಲ್ಲಿಂದ ಸೀತೆ? ಆ ಕಲ್ಲೆರ್ದೆ ಯವನು ರಾಮನೋ, ಭೀಮನೋ?

ಮು: ಎನ್ನ ಕೈಯ ಕಳಶವೆ? ಹೀಗೆ ಹೇಳುವುದುಂಟೆ? ಶ್ರೀರಾಮನು ಕಲ್ಲೆದೆಯವನೆ? ಮುಂದೆ ಅವನು ಅನುಭವಿಸಿದ ದುಃಖವನ್ನು ನೀನರಿತಿಲ್ಲ.

ಮನೋ: ಏನು? ತಾನೆ ತಲೆವೊಡೆದು ಮತ್ತೆ ಮರುಗಿದನೆ?

ಮು: ರಾಮನು ತಲೆವೊಡೆದನೇನು? ಅಲ್ಲ; ಲೋಕಾಪವಾದ ಭೀತಿ ಯಿಂದ ಅವಳನ್ನು ಕಾಡಿಗಟ್ಟಿದುದಲ್ಲದೆ ಸೀತೆಯಲ್ಲೇನು ಹಗೆಯೇ?

ಮನೋ: ಹಗೆಯೇನು ನಗೆಯೇನು? ಬಡವೆಯೊಬ್ಬಳು ಕಾಡಿಗಾದ ಳಷ್ಟೆ?

ಮು: ಇದನ್ನೇ ನೆನೆದು ನೆನೆದು ಪುನಃ ಪುನಃ ದುಃಖಿಸಿದನು.

ಮನೋ: ಏನು, ತನಗೆ ಬೇರೆ ಹೆಂಡಿರಿಲ್ಲವೆಂದು ಅತ್ತನೇನು?

ಮು: ಪರಿಹಾಸ ಸಾಕು! ಮುಂದಿನ ಕಥೆಯೇನು ಕೇಳು:

ಅಂತು ರಾಘವನು ಯಜ್ಞದೀಕ್ಷೆಯನ್ನು ಕಯ್ಕೊಂಡು ತುರಗವನ್ನು ಬಿಡಲು ಶತ್ರುಘ್ನನು ಅದರ ಬೆಂಗಾವಲಿಗೆ ನಿಂತನು. ಯಜ್ಞಾಶ್ವವು ಮುಂ ಗಾರೆನ್ನದೆ, ಸುಗ್ಗಿಯೆನ್ನದೆ, ಬೇಸಗೆಯೆನ್ನದೆ ಛಪ್ಪನ್ನ ದೇಶಗಳನ್ನು ಸುತ್ತುತ್ತ ಅಹಿಚ್ಛತ್ರ ಪುರವನ್ನು ಪ್ರವೇಶಿಸಿತು. ಅಹಿಚ್ಛತ್ರದ ಅರಸನಾದ ಸುಮದನು ಒಮ್ಮೆ ಶತ್ರುಗಳಿಂದ ಸೋಲಿಸಲ್ಪಟ್ಟು ಕಾಮಾಕ್ಷಿಯನ್ನು ತಪಸ್ಸಿನಿಂದ ಮೆಚ್ಚಿಸಿ ಹಿಂದಿನ ಸೌಭಾಗ್ಯವನ್ನು ಮರಳಿ ಪಡೆದಿದ್ದನು. ಅಂತೆಯೇ ತನ್ನೂರಿನಲ್ಲಿ ಅತ್ಯಂತ ಶ್ರೇಷ್ಠವಾದ ಕಾಮಾಕ್ಷಿ ದೇವಾಲಯ ವನ್ನು ಕಟ್ಟಿಸಿದ್ದನು. ಶತ್ರುಘ್ನನು ಕಾಮಾಕ್ಷಿ ದೇವಾಲಯವನ್ನು ಕಂಡು, ರಾಮಭಕ್ತನಾದ ಸುಮದನಿಂದ ಕಪ್ಪಕಾಣಿಕೆಗಳನ್ನು ಪಡೆದು, ಅವನ ಮಗನಿಗೆ ಪಟ್ಟಕಟ್ಟಿ ಮುಂದುವರಿದನು.

ಕುದುರೆಯು ಮುಂದುವರಿಯುತ್ತ ಅಶ್ವಿನೀದೇವತೆಗಳಿಗೆ ಸುರರ ಪಂಕ್ತಿಯಲ್ಲಿ ಎಡೆಮಾಡಿ ಹವಿರ್ಭಾಗವನ್ನು ಸಲ್ಲಿಸಿದ ಚ್ಯವನ ಋಷಿಗಳ [illegible]ಮವನ್ನು ಹಾದು ಮುಂದುವರಿಯಿತು. ಮುಂದುಗಡೆ ಕಾಣಿಸುತಿತ್ತು

ಅತಿ ಎತ್ತರವಾದ ನೀ[...]ರ್ವತ. "ಇ[...]ಲ್ಲಿ ಪುರುಷೋತ್ತಮ ದೇವಾಲಯವಿದೆ. ಹಿಂದೆ ರತ್ನಗ್ರಿ[...]ನು ಸಂಸಾರದಲ್ಲಿ ವಿರಕ್ತಿಗೊಂಡು ಇಲ್ಲಿಗೆ ಬಂದು ಪುರುಷೋ[...] ಭಜಿಸಿ ಮುಕ್ತಿಯನ್ನು ಪಡೆದನು" ಎಂದು ಮಂತ್ರಿಯು ಹೇಳಲು ರಾಘವಾನುಜನು ಕ್ಷೇತ್ರದರ್ಶನಗೈದು ಕುದುರೆಯನ್ನು ಹಿಂಬಾಲಿಸಿದನು.

ಶರತ್ಕಾಲವು ಬಂತು. ಶ್ರೀರಾಮನ ಕುದುರೆಯು ತೆಂಕುಮೊಗವಾಗಿ ನಡೆಯಲು ತೊಡಗಲು, ಚಕ್ರಾಂಕಪುರದ ರಾಜಕುಮಾರನಾದ ದಮನನು ಬೇಟೆಯಾಡಿ ಹಿಂತಿರುಗುತ್ತ ಇದನ್ನು ಕಂಡೊಡನೆಯೆ ಸೆರೆಹಿಡಿದು ತನ್ನ ಪಟ್ಟಣಕ್ಕೊಯ್ದನು. ಕುದುರೆಯ ನಿಮಿತ್ತದಿಂದ ಶತ್ರುಘ್ನನಿಗೂ, ರಾಜನಾದ ಸುಬಾಹುವಿಗೂ ಘೋರ ಯುದ್ಧವಾಗಲು, ಹನುಮಂತನು ತನ್ನ ಕಾಲಿನಿಂದ ಅವನ ಎದೆಯನ್ನು ಒದೆಯಲು, ಸುಬಾಹುವಿಗೆ ರಾಮಸ್ಮರಣೆಯುಂಟಾಗಿ ಕಪ್ಪಕಾಣಿಕೆಯೊಂದಿಗೆ ಕುದುರೆಯನ್ನು ಒಪ್ಪಿಸಿ ಶತ್ರುಘ್ನನ ಜೊತೆಯಲ್ಲೇ ಹೊರಟನು.

ಮು: ದೇವಿ!

ಮನೋ: ಆವ ದೇವಿ! ಶ್ರೀದೇವಿಯೋ? ಭೂದೇವಿಯೊ?

ಮು: ನಿನ್ನನ್ನೇ ದೇವಿಯೆಂದು ಕರೆದೆ.

ಮನೋ: ಅಂತಾದರೆ ನಾನಾವ ದೇವಿ?

ಮು: ರತಿದೇವಿ.

ಮನೋ: ಹಾಗೆಂದಾದರೆ ನೀನು ಕಾಮದೇವ.

ಮು: ಆಗಲಿ! ದೇವಿಯದೊಂದು ಅನುಗ್ರಹ!

ಮನೋ: ಒಳ್ಳಿತು! ಎಲೆ ಮದನಮೋಹನ ರಾಜ! ನೀ ಪೇಳ್ದ ರತಿಯನ್ನು ಬಣ್ಣಿಸಿ ಬಣ್ಣಿಸಿ ಹೊಗಳಲಾಪೆಯಾ?

ಮು: ಓ! ಇದೆಂತಹ ಮಾತೊ? ನನ್ನಿಂದ ಸಾಧ್ಯವೆ?

ಮನೋ: ಆಃ ನಿನ್ನ ರತಿಯನ್ನು ಬಣ್ಣಿಸಲು ಸಾಧ್ಯವಲ್ಲದ ನೀನೆಂತಹ ಕಾಮದೇವನೊ?

ಮು: ನಿಲ್, ನಿಲ್, ಸಾಧ್ಯನಾಗುವೆ. 'ಕಾಮದೇವ'ನೆಂಬ ಬಿರುದನ್ನು ಪಡೆದಮೇಲೆ 'ಆಗದೆ'ನ್ನಲು ಸಾಧ್ಯವೆ? ತೆಗಳದಿರು! ಇದೋ ತೊಡಗಿದೆ— ಅಸಿಯೊಡಲ ಹೂಗಣ್ಣಿನ ಹೆಣ್ಣು! ಚಂದ್ರವದನೆಯು, ಕೆಂಬಾಯಿಯು,

ಪುಸಿನಡುವಿನಶ್ರವಣದಲ್ಲಿರುತ್ತಿರಲಿಯ, ಆನೆ [illegible]ಗೆಯ, ಬಿಡುಜಡೆಯ ನೀರೆ................

ಮನೋ: ಆ! ಅ! ಏನು ಜಾಣ್ಮೆಯೇ ಸರಿ! ಎಂದೂ ಕಾಣದ ಹೊಸ ರೀತಿಯ ಬಣ್ಣನೆಯ ನುಡಿಗೇನನ್ನಲೊ? ಒಡಲೇನಸಿ? ಮುಖದಲ್ಲೆಲ್ಲಿ ಚಂದ್ರ? ಕಣ್ಣಲ್ಲೆಲ್ಲಿದೆ ಹೂ? ನಡುವಿನಲ್ಲಿ ಪುಸಿಯೆಲ್ಲಿ? ಜಡೆಯನ್ನು ಬಿಚ್ಚಿರಲು ಏನಾದರೂ ದೈವ ಬಡಿದುದೆ? ಪೋ! ನೀ ಕಾಮನಲ್ಲ; ಭೀಮನೇ ಸರಿ!

ಮು: ಎನ್ನ ಕುಲದೇವಿ! ಇಷ್ಟೊಂದು ಮುನಿಸೇಕೋ ಕಾಣೆ; ಸೈರಿಸು! ಸೈರಿಸು! ನುಡಿಯ ಸೊಗಸು ಹಾರದಂತೆ, ಇದ್ದುದಿದ್ದಂತೆ ಬಣ್ಣಿಸುವ ಜಾಣ್ಮೆಯೊದಗುವಂತೆ, ನುಡಿವೆಣ್ಣಾದ ವಾಣಿಯಿಂದ ವಾಕ್‌ಸಿದ್ಧಿಯನ್ನು ಪಡೆದು ರತಿಯಿಂದ ನೂರ್ಮಡಿ ಮಿಗಿಲಾಗಿ ವರ್ಣಿಸುವೆನು. ಸುವ್ವಿ, ಸುವ್ವಿ! ನಾಲ್ಮೊಗನಿಂದೊಗೆದ ಬೆಳ್ನಗೆಯ ಮುದ್ದು ಕುವರಿ, ವೀಣಾಪುಸ್ತಕಗಳನ್ನು ಹೊತ್ತ ಚೆಲುವೆ! ನನ್ನ ಈ ಮಡದಿರನ್ನೆಯನ್ನು ಹೊಗಳಿ ಹಾಡುವ ನುಡಿಬಿನ್ನಣವನ್ನು ಕರುಣಿಸು! ನಿನಗೆರಗುವೆ, ಸುವ್ವಿ, ಸುವ್ವಿ, ಅ, ಆ, ಆ, ಆ.

ಮನೋ: ನೀನೀಗ ಮಾಡಿದ ಸರಸ್ವತೀಸ್ತುತಿಯ ತುತ್ತತುದಿಯ 'ಆ ಆ' ಎಂದರೇನು?

ಮು: ಅದೊಂದು ಹಾಡಿನ ಧಾಟಿಯ ಸೊಗಸು.

ಮನೋ: ಆಯ್ತಾಯ್ತು! ಸರಸ್ವತಿಯೊಲಿದು ಏನನ್ನನುಗ್ರಹಿಸಿದಳು?

ಮು: ಹೇಗೆ ಹೇಗೋ ಹಾಡಿ ಬೇಡಿ ಅನುಗ್ರಹವನ್ನು ಪಡೆದೆ; ಈಗ ತಡಮಾಡದೆ ವರ್ಣಿಸಿ ನಿನ್ನೊಲುಮೆಯನ್ನು ಕೇಳ್:—ಮಾಕಾಳಿಯ ವೈಯ್ಯಕಾಂತಿಗೆ—

ಮನೋ: ರತಿಯನ್ನು ಬಣ್ಣಿಸುವ ಸಂಧಿಯಲ್ಲಿ ಮಾಕಾಳಿಯ ವಿಚಾರವೇಕೆ?

ಮು: ಆಃ ವಿಘ್ನರಾಜನನ್ನೇ ಮರೆತಿದ್ದೆ; ಆತನನ್ನು ಬಲಗೊಳ್ಳದಿದ್ದುದರಿಂದಲೇ ಇಂತು ವಿಘ್ನ ಒದಗಿತು. ಇರಲಿ. ಓ! ಓ! ಅಗಲ ಕಿವಿಯ, ಕೊಂಕು ಮೂಗಿನ, ದೊಡ್ಡ ಹೊಟ್ಟೆಯ, ಇಲಿತೇರ ಬೆನಕ! ಇದೊ ಮಣಿಯುವೆನು. ಈ ರಮಣೀಮಣಿ ರತಿದೇವಿಯನ್ನು ಬಣ್ಣಿಸುವ ಹೊತ್ತಿನಲ್ಲಿ ಆವರೀತಿಯೂ ವಿಘ್ನ ಒದಗದಂತೆ ಕಾಪಾಡುವುದು. ಇಷ್ಟೊಂದು ಅನುಗ್ರಹ ಮಾಡಿದೆಯಾದರೆ, ನನ್ನ ಈ ಮಡದಿ ಪ್ರೀತಿಯಿಂದ ತಿನ್ನಬಡಿ

ಸುವ ಚಕ್ಕುಲಿ, ಪುರಿಗಡಲೆ, ಅವಲು, ... ಯರ್—ಇವೆಲ್ಲ ವರಲ್ಲಿಯೂ ನಿನಗೆ ಪಾಲಿತ್ತು ಮೊದಲಿಗೆ...

ಮನೋ: ನೀ ಬಲು ಗಡಸುಗಾರ... ಈಗಲೇ ಬಣ್ಣಿಸು ನಿನ್ನ ರತಿಯ ಹೊಸಬಣ್ಣನೆಯನ್ನು!

ಮು: ಕೇಳ್:—ನಾನು ಬಣ್ಣಿಸುವ ರತಿಗೆ ಥಿಂದ ಮರಗೂಳನ (ತೊಳೆದ ಕೆಂಡ) ಅದೊಂದು ಕಾಂತಿಯಿದೆ; ಮಲೆನಾಡಲ್ಲಿರುವ ಶೃಂಗಾರ ಮೂರ್ತಿಯ (ಹನುಮಂತ) ಮುಖವಿದೆ; ಇರುಳುಗಣ್ಣಂತಿರುವ (ಗೂಗೆ) ಸುಂದರವಾದ ಕಣ್ಗಳಿವೆ. ಅಲ್ಲದೆ.......

ಮನೋ: ಎಲೆ ಕಾಮದೇವ! ಈಗ ತಿಳಿದೆ; ವರ್ಣನೆಯಲ್ಲಿ ನೀನು ಎರಡನೆಯ ಬ್ರಹ್ಮನೇ ದಿಟ! ನನ್ನ ಮುಡಿಯಲ್ಲಿದ್ದ ಹೂವಿನ ಸರದಾಣೆ! ನಿನಗಾವ ಭಕ್ಷ್ಯದಲ್ಲಿಷ್ಟ? ಹೂರಣ ಗಡುಬೋ? ಚಕ್ಕುಲಿಯೋ?

ಮು: ಇದೇನು? ಎನ್ನ ರತಿದೇವಿಯು ಅಡಿಯಿಂದ ಮುಡಿ ವರೆಗೆ ಬಣ್ಣಿಸುವ ಮೊದಲೇ ಒಲಿಯುವುದೆ?

ಮನೋ: ಕಡಲ ನೀರ ಸವಿ ತಿಳಿಯಲು ಕೊಡದಷ್ಟು ಕುಡಿಯ ಬೇಕೆ? ಹನಿ ಕುಡಿದರೆ ಸಾಲದೆ?

ಮು: ಅತಿಪ್ರಸಂಗ ಸಾಕು! ಮುಂದಿನ ಕಥೆಯನ್ನು ಕೇಳು:—ಅಶ್ವಮೇಧದ ಕುದುರೆಯು ಧನಧಾನ್ಯಗಳಿಂದ ಸಮೃದ್ಧವಾದ ಪತ್ತನವೊಂದನ್ನು ಪ್ರವೇಶಿಸಲು ಆಗ ಸುಮಂತ್ರನೆಂದನು, ಮಹಾರಾಜ! ಋತಂಭರನೆಂಬ ರಾಜನು ತನಗೆ ಮಕ್ಕಳಾಗದಿರಲು ಗೋಸೇವೆಯನ್ನು ಮಾಡಿ ಸತ್ಯವಂತನೆಂಬ ಮಗನನ್ನು ಪಡೆದನು. ಅವನ ರಾಜ್ಯವಿದು ಎಂದು ಹೇಳುತ್ತಿರುವಾಗಲೇ ಸತ್ಯವಂತನು 'ರಾಮ'ನಾಮವನ್ನು ಕಂಡು ಭಕ್ತಿಯಿಂದ ಕಪ್ಪಕಾಣಿಕೆಯನ್ನರ್ಪಿಸಲು ಶತ್ರುಘ್ನನು ಸಂತಸದಿಂದ ಮುಂದೆ ಹೊರಟನು. ಸಕಲ ಗುಣಸಂಪನ್ನೆ! ಏಕಗುಣಹೀನೆ!

ಮನೋ: ಅಬ್ಬಾ! ನನ್ನ ಗುಣದಲ್ಲಿ ಅವುದೋ ಒಂದು ಹೀನಂ?

ಮು: ಕಥೆಯನ್ನು ಹೇಳುವ ಸಮಯದಲ್ಲಿ ನಿದ್ದೆಯ ಬಿಣ್ಪಿಂದ ತೂಂಕಡಿಸುತ್ತಿರುವ ಒಂದು ಗುಣ ಹೀನ ಅಷ್ಟೆ!

ಮನೋ: ತೂಕಡಿಸದೆ ಇನ್ನೇನು ಮಾಡಲಿ? ಕಿವಿಗೆ ಸವಿಯೆನಿಸದ ನಿನ್ನ ರಗಳೆಯ ಕಥೆಗೆ?

ಮು: ಶ್ರವಣದಲ್ಲಿರುತ್ತಿರ...ನು ನಿನಗೆ?

ಮನೋ: ...ಚ್ಚೋ! ತಿಳಿಯೆನು. ಎದೆಪುಗುವ ಕಥೆಯಾದರೆ ಸರಿ!

ಏನು

ಮು: ಮುಂದೆ ಕೇಳು!...ದುರೆ ಸಾಗುತಿದ್ದಂತೆ ಸಾವಿರ ಸಾವಿರ ಸೈನಿಕರು ಅದನ್ನು ಅನುಸರಿಸುತಿದ್ದರು. ಆಗ ಅಕಸ್ಮಾತ್ತಾಗಿ ವಿದ್ಯುನ್ಮಾಲಿಯೆಂಬ ರಕ್ಕಸನು ಕಗ್ಗತ್ತಲೆಯುನ್ನುಂಟುಮಾಡಿ ಶತ್ರುಘ್ನನ ಸೈನ್ಯವನ್ನು ಮುತ್ತಲು, ಹನುಮಂತನ ಗುದ್ದೊಂದು, ಲಕ್ಷ್ಮೀನಿಧಿಯ ಗದೆಯ ಪೆಟ್ಟೆರಡು, ಪ್ರತಾಪಾಗ್ರ್ಯನ ಕತ್ತಿಯ ಕಡಿತ ಮೂರು, ಪುಷ್ಕಲನ ಬಾಣದ ಹೊಡೆತ ನಾಲ್ಕು, ಇತರ ರಾಜರ ಈಟಿಯ ಇರಿತ ಐದು—ಹೀಗೆ ಐದರಿಂದ ರಕ್ಕಸನು ಪಂಚತ್ವವನ್ನು ಪಡೆದನು.

ಮು: ಓ ಎನ್ನತ್ತೆಯ ಮಗಳೆ! ಮುತ್ತಿನ ಸೆಂಡೆ!

ಮನೋ: ಸುಮ್ಮಸುಮ್ಮನೆ ಕರೆದು ಕರೆದು ವರ್ಣಿಸದಿರು; ನನಗೆ ತಲೆನೋಯುವುದು.

ಮು: ಅದೇನು ಕಾರಣ ಅರಸಿ?

ಮನೋ: ಅಡಿಮುಡಿಯಿಲ್ಲದ ನಿನ್ನ ಕಥೆಗೆ!

ಮು: ಆಯ್ತಾಯ್ತು; ಮುದ್ದುಮೊಗದ ಸಿಂಗಾರಿ! ಎನ್ನ ಚಿತ್ರದ ಬೊಂಬೆ! ಮನಸ್ಸಿಗೊಪ್ಪುವಂತೆ ಪೇಳುವೆನು ಕೇಳು:—

ಇಂತು ರಾಘವನ ಅಶ್ವಮೇಧದ ಕುದುರೆಯು ನಾಡನು ಬಿಟ್ಟು ಕಾಡನ್ನು ಸೇರಿ ಅರಣ್ಯಕನೆಂಬ ಋಷಿಯ ಪುಣ್ಯಾಶ್ರಮವನ್ನು ಪ್ರವೇಶಿಸಲು, ಶತ್ರುಘ್ನ ಮೊದಲಾದವರೂ ಪರ್ಣಶಾಲೆಯನ್ನು ಹೊಕ್ಕು ಮಹರ್ಷಿಗೆ ಸಾಷ್ಟಾಂಗವೆರಗಿದರು. ಮುನಿಯು ಅವರೆಲ್ಲರನ್ನೂ ಆದರದಿಂದ ಬರಮಾಡಿ ಅತಿಥಿಸತ್ಕಾರದಿಂದ ತೃಪ್ತಿಗೊಳಿಸಿದನು.

ಮನೋ: ಎನ್ನ ಚೆನ್ನಿಗ! ಅತಿಥಿಸತ್ಕಾರವೆಂದರೇನು? ಬರಿದೆ ಬಾಯುಪಚಾರವೆ?

ಮು: ಅಲ್ಲಲ್ಲ....ಬಂದವರ ಕೈಗೆ ಕಾಲಿಗೆ ನೀರಿತ್ತು, ಅವರನ್ನು ಕುಳ್ಳಿರಿಸಿ ವಸ್ತ್ರಾಭರಣಗಳಿಂದಲಂಕರಿಸಿ ಸವಿಗೂಳಿಂದ ಸಂತೋಷಗೊಳಿಸುವುದು.

ಮನೋ: ಹಾಗಾದರೆ ಆ ಬಡ ತಪಸಿಯು ಶತ್ರುಘ್ನನ ಸಾವಿರಾರು ಸೈನಿಕರನ್ನು ಆ ರೀತಿಯಿಂದುಪಚರಿಸಿದನೆ?

ಮು: [illegible] ಅವರೆಲ್ಲರ[illegible]ಷ್ಟಾನ್ನ ಭೋಜನ ಮಾಡುವಂತೆ ಮಾಡಿದನು.

ಮನೋ: ನನಗಿದು ಆಶ್ಚರ್ಯ! [illegible] ಈ ಸಾಮರ್ಥ್ಯ?

ಮು: ಮುನಿಗಳ ತಪಸ್ಸಿನ ಮಂತ್ರದ ಶಕ್ತಿಯೇನು ಕಡಿಮೆಯೆ? ಬೇಡಿದ ವಸ್ತುಗಳನ್ನು ಅದು ಬೇಗನೆ ತಂದೀವುದು.

ಮನೋ: (ಆಶ್ಚರ್ಯದಿಂದ ಬಾಯಿಬಿಟ್ಟು) ಓ! ಈ ರೀತಿಯ ಮಂತ್ರ ಶಕ್ತಿಯ ಸಹಾಯವಿರುವುದರಿಂದಲೇ ಕಾಡಿನಲ್ಲಿ ಬೇರೆ ಯಾವುದರ ಗೊಡವೆಯಿಲ್ಲದೆ ಸುಖವಾಗಿರುವರವರು.

ಮು: ಅಹುದಹುದು. ತಪ್ಪೇನು?

ಮನೋ: ಅದಂತಿರಲಿ, ನಿನ್ನಂತಹ ಕವಿಗಳು ಮನೆವಾರ್ತೆಯಲ್ಲಿ ಎಳ್ಳಷ್ಟಾದರೂ ಗಮನವಿಲ್ಲದೆ ಸುಮ್ಮಸುಮ್ಮನೆ ಕತೆ, ಕವನಗಳೆಂದು ಸದಾ ಕಾಲ ಅದರಲ್ಲೇ ಮುಳುಗಿರುವರಲ್ಲವೆ? ಅಂತವರಿಗೆ ಬದುಕುವ ಗತಿ ಯಾವುದೋ? ಅದಕ್ಕಿಂತ ಅಂತಹ ಮಹರ್ಷಿಗಳಿಂದ ಒಂದೆರಡು ಮಂತ್ರಗಳ ಉಪದೇಶವನ್ನು ಪಡೆದರೆ ಎಷ್ಟೋ ಒಳ್ಳೆಯದಾಗದೇ?

ಮು: (ಮನದೊಳಗೆ ನಕ್ಕು) ಏನು? ನಮ್ಮಂತವರ ಜೀವನವನ್ನು ನೋಡಿ ನೀನು ನಗುವುದೆ? ನಮ್ಮಂತಹ ಕವಿಗಳಿಗೆ ಆವ ಕೊರತೆಯಿದೆಯೆಂದು ತಿಳಿದೆಯೊ? ಕಾಡನ್ನು ನಾಡನ್ನಾಗಿ, ನಾಡನ್ನು ಕಾಡನ್ನಾಗಿ ಮಾಡುವ ಅತ್ಯದ್ಭುತಶಕ್ತಿಯು ನಮ್ಮಲ್ಲಿರಲು ಕಾಡಿನ ಹಣ್ಣು ಹಣ್ಣು ಮುದಿ ಜೋಗಿಗಳಿಂದ ಉಪದೇಶ ಬೇಕೆ? ನಾವು ನುಡಿದುದೆ ಪುರುಳು! ನಾವು ಹಿಡಿದುದೆ ತಿರುಳು! ಹಲವೇನು? ಕೆಲವೇನು? ತಮ್ಮ ಕವಿತಾಶಕ್ತಿಯಿಂದ ಮೂರು ಜಗತ್ತನ್ನೇ ಅಳಿಯಿಸುವ, ಉಳಿಯಿಸುವ, ಹೊಗಳುವ, ತೆಗಳುವ, ಕೊಳ್ಳುವ, ಆಳುವ, ತಾಳುವ, ತೂಳುವ, ಹೂಳುವ, ಬಾಳುವ, ಬಲ್ಪುಳ್ಳ, ಶೃಂಗಾರದ ವರ್ಣನೆಯುಳ್ಳ ನಮ್ಮಂತಹ ಕವಿಗಳ ಮಹಿಮೆಯನ್ನು ನೀನಿನ್ನು ತಿಳಿದಿಲ್ಲ.

ಮನೋ: (ಬೆರಗಾಗಿ) ಅಂತಾದರೆ ನಿಮ್ಮಂತವರಿಗೂ ಮಂತ್ರಸಿದ್ಧಿ ಇದೆಯೆ?

ಮು: ಅದರಲ್ಲಿನ್ನು ಸಂಶಯವೆ?

ಮನೋ: ಹಾಗಾದರೆ ನಿನ್ನಲ್ಲಿಯೂ ಅದು ಇದೆಯೆ?

ಮು: ಶ್ರಮದಲ್ಲಿರುತ್ತಿರ...ನ್ ಹಾಸುಹೊ...!

ಮನೋ: ... ಚ್ಚೋ ಮಹಿಮೆಗಾರನು. ನಿನಗ ಆರಿಂದ, ಎಂದು ಉಪದೇಶವಾಯ ಏನು

ಮು: ಬಾಲ್ಯದಲ್ಲೇ —...ರುಗಳಿಂದ

ಮನೋ: ಅನ್ನೆರೆಯು! ಅದಾವುದೋ ಮಂತ್ರ?" ನನ್ನೊಡನೆ ಹೇಳಬಾರದೆ?

ಮು: ಏನೇನು? ಒಳ್ಳೆಯುದೊಳ್ಳೆಯುದು! ಮಂತ್ರವಂತೆ! ತನಗೆ ಹೇಳಬೇಕಂತೆ! ಛೆ! ಛೆ! ಹೆಂಗಸರಿಗೆ ಮಂತ್ರೋಪದೇಶ ಸಲ್ಲುವುದೆ?

ಮನೋ: ನನಗದು ತಿಳಿದಿಲ್ಲವೆ? ಮಂತ್ರೋಪದೇಶ ಬೇಕೆಂದು ಬೇಡಿತೆನೆ? ನೀನಾಗ ಹೇಳಿದ ಮಂತ್ರದ ಹೆಸರೇನೆಂದು ಕೇಳಿದೆನಷ್ಟೆ!

ಮು: ಮುನಿಗಳ ರೀತಿಯ ಮಂತ್ರಗಳಲ್ಲ ನಮ್ಮವು. ನಮ್ಮ ಮಂತ್ರಗಳ ರೀತಿಯೇ ಬೇರೆ! ಒಂದೆರಡಕ್ಷರದ ಮಂತ್ರಗಳು ನಮಗೆ ಸಾಲುವವೆ? ನಮ್ಮ ಮಂತ್ರ ಬಹಳ ದೊಡ್ಡದು! ಒಂದೆರಡಕ್ಷರಗಳಲ್ಲ! ನಾಲ್ಕೈದಲ್ಲ! ಆರೂ ಅಲ್ಲ! ಏಳಕ್ಷರದ ಬೀಜಮಂತ್ರ! ಅದುಕಾರಣ ಎಲ್ಲಾ ಮಂತ್ರಗಳ ಮೇಲಿದ್ದು 'ಸಪ್ತಾಕ್ಷರೀ' ಎಂಬ ಬಿರುದುಪಡೆದ ಮಹಾಮಂತ್ರವಿದು.

ಮನೋ: ಓಹೊ! ಹಾಗೊ? ಈ ಮಂತ್ರಕ್ಕೆ ಅಭಿಮಾನಿದೇವತೆ ಯಾರ ? ಮೊದಲು ಆರಿದನ್ನು ಜಪಿಸಿ ಸಿದ್ಧಿಗಂಡಿರುವರು?

ಮು: ಸಾಕು! ಸಾಕು! ಅದೆಲ್ಲ ನಿನಗೇಕೆ?

ಮನೋ: ಇರಲಿ! ಕೇಳಬಾರದೆ?

ಮು: ಹಾಗಾದರೆ ಕೇಳು! ಈ ಮಂತ್ರದ ಅಧಿದೇವತೆ ಜ್ಯೇಷ್ಠೆ! ಈಶ್ವರನೇ ತನ್ನೊಂದು ಲೀಲೆಯಲ್ಲಿ ಮೊದಲು ಜಪಿಸಿ ಸಿದ್ಧಿಪಡೆದವನು.

ಮನೋ: ಹೀಗುಂಟೆ ಮಂತ್ರದ ಮಹಿಮೆ? ಎಲೆ ಚೆನಿಗ, ನನ್ನದೊಂದು ವಿಜ್ಞಾಪನೆ! ನಿನ್ನ ಕಾಲಿಗೆರಗಿ ಬೇಡುವೆನು! ನಿನ್ನಲ್ಲಿ ಉಪದೇಶಗೊಂಡ ಆ ಮಂತ್ರ ಯಾವುದೆಂದು ತಿಳಿಸು.

ಮು: ಆಗಲೇ ಹೇಳಿದೆನಷ್ಟೆ ಸಪ್ತಾಕ್ಷರೀ ಮಂತ್ರವೆಂದು!

ಮನೋ: ಹೆಸರಲ್ಲ! ಮಂತ್ರದ ಮೂಲವನ್ನೇ ಹೇಳಬಾರದೆ?

ಮು: ಹೆಣ್ಣು ಅದೆಷ್ಟು ಗಡಸುಗಾತಿಯೋ? ಆಗ ಹೆಸರೇನೆಂದು ಕೇಳಿದಳು! ಈಗ ಮೂಲವನ್ನೇ ಕೇಳುವಳು! ಇನ್ನೇನು ಮಾಡುವಳೋ?

ಮೂರೆಳೆಯು ಯಜ್ಞೋಪವೀತದಾಣೆ ... ...ವುದಕ್ಕೆ ಹೇಳು ವುದಕ್ಕೆ ನಿಮಗಾವುದೂ ಅಧಿಕಾರವಿಲ್ಲ. ...ಗೆ ಕೇಡು!

ಮನೋ: ಕಿವಿಯಿಂದ ಕೇಳಿದರೆ ...ವೇನು? ವೇದವನ್ನೋದುವ ಮಂತ್ರಶಾಲೆಗಾದರೂ ಹೆಣ್ಣು ಹೋಗುವುದಿಲ್ಲವೇನು?

ಮು: ವೇದಮಂತ್ರದ ಬಗೆ ಬೇರೆ! ಇದು ಮಹತ್ತು ಅದರಲ್ಲಿ ಅಜಗಜಾಂತರ! ತತ್ರಾಪಿ ಮಂತ್ರವೆಂಬುದು ಗೂಢಾದ್ಗೂಢತರವಾದುದು. ಅದುಕಾರಣ ನಾನು ಹೇಳಬಾರದು, ನೀನು ಕೇಳಬಾರದು. ಮುಂದಿನ ಕತೆ ಕೇಳು; ಆ ಮೇಲೆ ಅರಣ್ಯಕನು..........

ಮನೋ: ತಡೆ ತಡೆ ನಿನ್ನ ಕಥೆ! ಅದಾವುದು ಮಂತ್ರ? ಕೇಳಿಯೆ ಕೇಳುವೆನು. ಕೊರಲಾಣೆ: ಉಂಗುರದಾಣೆ! ಹೇಳಿದುದಲ್ಲದೆ ಬಿಡೆನು.

ಮು: ಏನು ಚಲವೋ ಚಪಳೆಗೆ? ಹೇಳೆನು ಎಂದರೆ ಕೇಳಳು: ಆರೊಡನೆಯೂ ಹೇಳದ ನಮ್ಮ ಬೀಜಮಂತ್ರವನ್ನು ಹೇಗೆ ಹೊಲೆಗೆಡಿಸಲಿ? ಎಳೆಯ ಹೆಂಡತಿಯರ ಕೈಯೊಳಗಿರುವ ಕವಿಗಳ ಬಾಳುವೆಯೇ ದೂಷ್ಯವಾದುದು. [ಆಲೋಚಿಸಿ] ಎಲೆ ಹೆಣ್ಣೆ! ಯಾರೊಡನೆಯೂ ಎಂದೆಂದಿಗೂ ಅದನ್ನು ಹೇಳಬಾರದು. ಜೋಕೆ.

ಮನೋ: ಎಂತಾದರೂ ಎಂದಾದರೂ ಹೇಳೆನು, ಆಯಿತೆ?

ಮು: ಹಾಗಾದರೆ! ಇಗೋ! ಹೇಳುವೆನು. ಭವ............ಇತರರೊಡನೆ ಹೇಳೆನೆಂದು ಭಾಷೆಗೊಡು.

ಮನು: ಇದೊ! ಹಿಡಿ! ನಂಬುಗೆ ಕೈ! ನಿನ್ನಾಣೆ! ಕುಲದೈವದಾಣೆ! ಇತರರೊಡನೆ ಹೇಳೆನು.

ಮು: "ಭವತಿಭಿ"............ಹೆಣ್ಣುಗಳನ್ನು ನಂಬಲಾಗದೆಂದು ಹಿರಿಯರು ಹೇಳುವರು. ನೀನು ಎಲ್ಲಾದರೂ ಮರೆತು ನಮ್ಮ ಗುಟ್ಟನ್ನು ಬಿಟ್ಟರೆ?............?

ಮನೋ: ನಾನೇನು ಮೋಡಿಯೆ? ತನ್ನಾಣೆ! ಕಣ್ಣಾಣೆ! ಯಾರೊಡನೆಯೂ ಹೇಳೆನು.

ಮು: ಸರಿ: [ಗುಟ್ಟಾಗಿ] 'ಭವತಿ ಭಿಕ್ಷಾಂ ದೇಹಿ' ಎಂಬುದೇ ಕವಿಗಳಿಗೆ ಸಿದ್ಧಿಸಿದ ಹೆಮ್ಮೆಯ ಮಂತ್ರ! ಆರೊಡನೆಯೂ ಹೇಳಬೇಡ.

ಮನೋ: ಓ! ಇಷ್ಟೆಯೇ? ನಿನ್ನ ನುಡಿ ಸಹಜವೆಂದೇ ತಿಳಿದಿದ್ದೆ.

ಇದು ಕೊಂಕ[illegible]ದಲ್ಲಿರುತ್ತಿರ[illegible]ಯದೆ ಹೋ[illegible] ನೀನು ಕಬ್ಬಿಗನೋ ಕಬ್ಬವಗಾರನೊ?

ಮು: ಸಾಕು [illegible] ಏನು [illegible]ಸ. ಮುಂದಿನ ಕಥೆ ಕೇಳು: ಅರಣ್ಯಕ ಮುನಿಯಿಂದ ಬೀಳ್ಕೊಂಡ ಶತ್ರುಘ್ನಾದಿಗಳು ಮುಂದುವರಿಯುತಿದ್ದಂತೆ ಕುದುರೆಯು ಒಂದಾನೊಂದು ನದಿಯನ್ನು ದಾಟುತ್ತಿದ್ದಂತೆ ಅದು ಮಾಯ ವಾಯಿತು. ಶತ್ರುಘ್ನನು ಕುದುರೆಯನ್ನರಸುತ್ತ ಪಾತಾಳದಲ್ಲಿದ್ದ ಯೋಗಿನಿ ಯನ್ನು ಕಂಡು ಅವಳಲ್ಲಿದ್ದ ಕುದುರೆಯನ್ನು ಹೊರತಂದನು.

ಬೆಳತಿಗೆಗಣ್ಣ ಪೆಣ್ಣೆ! ಕುದುರೆಯು ಮುನ್ನಡೆಯುತ್ತ ದೇವಪುರವನ್ನು [illegible]ವೇಶಿಸಲು ಶ್ರೀರಾಮನು ಪರದೈವತವೆಂದು ತಿಳಿದಿದ್ದರೂ ಈಶ್ವರನೇ ಬೇ[illegible]ಳಿಯನಾಗಿದ್ದುದರಿಂದ ಧೈರ್ಯಗೊಂಡ ವೀರ ಮಣಿಯು ಶತ್ರುಘ್ನ [illegible]ಡನೆ ಬಲವಾದ ಕಾಳಗವಸೆಗಿದನು. ಕೈಸೋತ ಶತ್ರುಘ್ನನು ಶ್ರೀರಾಮ ಚಂದ್ರನನ್ನು ಸ್ಮರಿಸಲು, ಆ ಕ್ಷಣದಲ್ಲೇ ದೀಕ್ಷಾಬದ್ಧನಾದ ಶ್ರೀರಾಮನು ರಣರಂಗದ ಮಧ್ಯದಲ್ಲೇ ಕಾಣಿಸಲು ವೀರಮಣಿಯು ಅವನ ಕಾಲಿಗೆ ಬಿದ್ದು ಕ್ಷಮೆಯನ್ನು ಯಾಚಿಸಿದನು. ಮುಂದೆ ಶತ್ರುಘ್ನನು ವೀರಮಣಿಯ ಮಗನಾದ ರುಕ್ಮನಿಗೆ ಪಟ್ಟಗಟ್ಟಿ ಕುದುರೆಯನ್ನು ಅನುಸರಿಸಿದನು.

ಮು: ಎಲೆ ಕಾಮಿನಿ! ಕಾಮಕಳಾನಿಧಾನೆ! ಕಾಮಕಾಳೋರಗ ಕೇಶ............

ಮನೋ: ಎನ್ನ ರನ್ನ! ಇಂದೇನು? ನಿನ್ನ ವಿಸ್ತಾರದ ವರ್ಣನೆಯಲ್ಲಿ ಕಾಮದ ಧ್ಯಾನವೊಂದು ಸೇರಿತೇನು?

ಮು: ನಾಜ! ಈಗಳಲ್ಲವೆ ನಾಡಿನಲ್ಲಿ ಕಾಮನ ಹಬ್ಬದ ದಿವಸಗಳು! ಅದರಿಂದ ತಿನ್ನುವ ಹುಗ್ಗಿಯಲ್ಲಿ ಒಗ್ಗರಿಸಿದ ಕಡಲೆಯಂತೆ ಬಣ್ಣನೆಯಲ್ಲಿ ಬಂದಿಳಿಯಿತು.

ಮನೋ: ಎಲೆ ರಮಣ! ಲೇಸು ಮಾಡಿದೆ. ನಿನ್ನ ಬಣ್ಣನೆಯ ಬೆಡಗಿನಿಂದ ನನ್ನನ್ನೆಚ್ಚರಿಸಿದೆ: ನಾಳೆಯಲ್ಲವೆ ಕಾಮನ ಹಬ್ಬ?

ಮು: ಓ! ಓ: ಭಂಗಿಯುಂಡವ ಮೊದಲುಂಡುದನ್ನು ಮರೆಯು ವಂತೆ ನಾನು ಮರೆತಿದ್ದೆ. ಅಂತಾದರೆ ನಾಳೆಗೇನು? ಮಂಡಿಗೆಯೋ ಹೋಳಿಗೆಯೋ?

[illegible]ನೋ: ನಿನಗೊಂದೇ — ಭೀಮನಿಗಿದ್ದ ಹಾಗೆ ತಿನ್ನುವ ಬಯಕೆ:

ಶಾಳೆ ನನಗೊಂದು ವ್ರತ. ಬೆಳಗಿನಿಂದ ಉಪವಾಸವಿರಲೇ ಬೇಕು.

ಮು: ಈಗ ಮಾತ್ರ ನಾನು ಕತ್ತರಿ ಸಿಕ್ಕಿಬಿದ್ದಂತಾದೆ: ಕುದುರೆಯ ಕಾಲು ಹೇಗೆ ಕಲ್ಲಿನಲ್ಲಿ ಸಿಲುಕಿಕೊಂಡಿತೋ ಅಂತೆಯೇ ನನ್ನ ಮನಸ್ಸೂ ಸಿಲುಕಿಕೊಂಡಿತು.

ಮನೋ: ರಮಣ! ಅದೆಂತಹ ಕಥೆ?

ಮು: ದೇವಪುರದಿಂದ ಹೊರಟ ಕುದುರೆಯು ಹೇಮಕೂಟದ ಕಾಡೊಂದರಲ್ಲಿ ನಡೆಯುತ್ತಿರಲು ಅದರ ಕಾಲು ಶಿಲೆಯಲ್ಲಿ ಸಿಲುಕಿಕೊಂಡಿತು. ಏಂಗ್ಯೈದರೂ ತೆಗೆಯಲು ಬಾರದಿರಲು, ಸಮೀಪದಲ್ಲಿದ್ದ ಶೌ ಋಷಿಗಳ ಅಪ್ಪಣೆಯಂತೆ ಹನುಮಂತನು ರಾಮನ ಚರಿತೆಯನ್ನು ಸು ಶಿಲಾರೂಪನಾಗಿದ್ದ ಸಾತ್ವನನು ಶಾಪವಿಮುಕ್ತನಾಗಿ ಅತ್ತ ತೆರಳಿದನು. ಕುದುರೆಯೂ ಮುಂದುವರಿಯಿತು. ಕುಂಡಲಪುರದಲ್ಲಿ ಸುರಥನೆಂಬ ರಾಜನಿದ್ದನು. 'ಶ್ರೀರಾಮನ ದರ್ಶನವಾಗದೆ ಅಶ್ವವನ್ನು ಬಿಟ್ಟುಕೊಡಲಾರೆ' ಎಂದು ಪ್ರತಿಜ್ಞೆ ಮಾಡಲು, ಶ್ರೀರಾಮನು ಪ್ರತ್ಯಕ್ಷನಾಗಿ ಅವನ ಇಷ್ಟಾರ್ಥವನ್ನು ನೆರವೇರಿಸಿದನು. ಶತ್ರುಘ್ನನು ಸುರಥನನ್ನು ಕೂಡಿಕೊಂಡು ಮುಂದುವರಿಯುತ್ತಿರಲು, ಎಲೆ ರಾಮಾಭಿರಾಮೆ! ನೀಲಕುಂತಳೆ! ತೋಟದಲ್ಲಿ ಆಡುತಿದ್ದ ಕಿರುವರೆಯದ ಕುಮಾರರಿಬ್ಬರು ತಡೆದು, ಹಿಡಿದು ಕುದುರೆಯನ್ನು ಕಟ್ಟಿದರು.

ಮನೋ: [ಇನ್ನಷ್ಟು ಹತ್ತಿರ ಬಂದು] ಎನ್ನ ಚಿನ್ನರಸ! ಮುನಿಗಳಾಶ್ರಮದಲ್ಲಿರುವ ಮಕ್ಕಳಿಗೆ ಯಾಗದ ಕುದುರೆಯನ್ನು ಕಟ್ಟುವಷ್ಟು ಬಲ್ಪು ಹೇಗೆ ಬಂತೊ! ಅಚ್ಚಾ! ಏನ್ ಗಡಸುಗಾರರೊ? ಆರವರು?

ಮು: ಉ! ಆರಾದರೇನು! ಸಾಕು ಈ ಹಾಳುಕಥೆ: ಕಥೆ ಹೇಳಿ ಬೇಸತ್ತೆ: ಹೇಗಾದರೂ ಯಜ್ಞಸಮಾಪ್ತಿ ಮಾಡುವೆ.

ಮನೋ: ಮುದ್ದು ಮೊಗದ ಚೆನ್ನಿಗ! ಅದಾಗದು: ನನ್ನಾಣೆಯಿದೆ: ರಣದಲ್ಲಿ ಬಾಲಕರು ಗೆದ್ದರೆ ಸೋತರೆ ನಿನಗೇಕೆ ಬೇಸರವೋ ಕಾಣೆ!

ಮು: ನೀನು ಉಡುಗೊರೆಯನ್ನು ಕೊಡುವುದಾದರೂ ಏನು? ಸುಮ್ಮನೆ ಹೇಳುವರೆ?

ಮನೋ: ಾದಲ್ಲಿರುತ್ತಿರ ನ ಾಷಿ ಬೇಡ ವರೆ ಅದೊಂದು ಉಡು ಗೊರೆಯೆ? ಮನವೊ ಚಿರಲ್ಲವೆ ಮೆಚ್ಚು?

ಮು: ಅಯ್ತಾಯ್ತು ನು ಡುವೆ: ಕೇಳು: ವಾಲ್ಮೀಕಿಯಾಶ್ರಮದಲ್ಲಿ ವಾಸಿಸುತಿದ್ದ ಸೀತೆಯು ತಿಂಗ ು ತುಂಬಲು ಅವಳಿ ಜವಳಿ ಮಕ್ಕಳನ್ನು ಹೆತ್ತಳು. ವಾಲ್ಮೀಕಿಯು ಆ ಮಕ್ಕಳಿಗೆ ಕುಶ ವರೆಂಬ ಹೆಸರಿಟ್ಟು, ಸಕಲ ವಿದ್ಯೆಯನ್ನೂ ಕಲಿಸಿ, ಶಸ್ತ್ರ ಶಾಸ್ತ್ರಗಳೆರಡರಲ್ಲಿಯೂ ಬುದ್ಧಿವಂತರನ್ನಾಗಿ ಮಾಡಿದನು. ಸಿಂಹದ ಮರಿಯು ಎಲ್ಲಿದ್ದರೂ ನರಿಯಾದೀತೆ? ಬಿರುಗಾಳಿಯು ಹೊಡೆತಕ್ಕೆ ಬೇರುಡಿದು ಬೀಳುವ ಮರಗಳಂತೆ ಕುಶಲವರ ಬಾಣಗಳಿಂದ ಶತ್ರುಘ್ನಾದಿಗಳು ಧರೆಗೊರಗಲು, ಅಳಿಧುಳಿದ ಸೈನಿಕರು ಓಡಿಯೋಡಿ ಬೇ ಾಮನಿಗೆ ತಿಳಿಸಿದರು. ರಾಮನು ಲಕ್ಷ್ಮಣಸಮೇತನಾಗಿ ಬಂದು ನಿಸಿದರೂ, ಮಕ್ಕಳು ಅಂಜದೆ ಅಳುಕದೆ ಯುದ್ಧಮಾಡುತ್ತಿರಲು, ಅತ್ತ ವರುಣಲೋಕಕ್ಕೆ ಹೋಗಿದ್ದ ವಾಲ್ಮೀಕಿಯು ಓಡಿ ಓಡಿ ಬಂದು 'ತಡೆಯಿರಿ, ತಡೆಯಿರಿ' ಎಂದನು. ಮಕ್ಕಳಿಬ್ಬರೂ ಮುನಿಗೆ ವಂದಿಸಲು, ಮುನಿಯು ಮಕ್ಕಳ ನಿಜವಾರ್ತೆಯನ್ನು ತಿಳುಹಿ, ಶ್ರೀರಾಮನನ್ನು ಸಮಾಧಾನಗೊಳಿಸಿ ತನ್ನಾಶ್ರಮಕ್ಕೆ ಎಲ್ಲರನ್ನೂ ಕರೆದೊಯ್ದನು.

ಮು: ಏನೆ? ಕೊನೆಗೆ ಹೂಂಗುಟ್ಟದೆ ಗುಮ್ಮನೆ ಸುಮ್ಮನಿರುವೆ?

ಮನೋ: ಮಕ್ಕಳ ಸಾಹಸಕ್ಕೆ ಬೆರಗುವಟ್ಟು ಸುಮ್ಮನಿದ್ದೆ! ಅಷ್ಟೆ.

ಮು: ನೀನೊಬ್ಬಳೇ ಅಲ್ಲ! ಬಾನಲ್ಲಿದ್ದ ದೇವಸ್ತ್ರೀಯರೂ ಬೆರಗಾಗಿದ್ದರು. ಕಟ್ಟಕಡೆಗೆ ರಾಮ ು ಸೀತೆಯನ್ನು ಚಿನ್ನದ ಪಲ್ಲಕಿಯಲ್ಲಿ ಕುಳ್ಳಿರಿಸಿ ಅಯೋಧ್ಯೆಗೆ ತೆರಳಿದನು.

ಮನೋ: ಅಂತಾದರೆ ನೀ ಹೇಳುತಿದ್ದ ಕತೆಯು ಮುಗಿಯುತ್ತ ಬಂತು.

ಮು: ಉ: ಎಂತೆಂತೋ ರಗಳೆಯ ಕಥೆ ಮುಗಿಯುತ್ತ ಬಂತು.

ಮನೋ: ಮುದ್ದಿನರಸ! ತಮ್ಮೊಡವೆಯನ್ನು ತಾವೇ ಹೊಗಳುವರೆ? ನನಗೊಬ್ಬಳಿಗೆಂದೇನು? ನಾಡಿನಲ್ಲಿದ್ದವರಿಗೆಲ್ಲರಿಗೂ ಮೆಚ್ಚುಗೆಯಾದುದು. ಈ ಬಗೆಯ ಕಾವ್ಯವು ಹಿಂದಿಲ್ಲ, ಮುಂದಿಲ್ಲ: ಎಂಬಂತಾದುದು.

ಮು: ಹಾಗೆಂದಾದರೆ ತರಬಾರದೆ ನೀನೆಂದ ಮೆಚ್ಚಿನ ಉಡುಗೊರೆಯನ್ನು?

ತ... ...ತಸಾಗಿ ...

ಹ... ...ಬೆಳಗಿಸಿ, ಕೋ...

...ಂತಿಗಳನ್ನು ...ಮ್ಯಂ, ಶುಭಂ,

...ಸಿದ್ದನು. ಕ... ...ವಳು]

...ರವೆ ಎದ್ದು ಹೋಗ...! ಮುದ್ದಣನನ್ನು ತಕ್ಕಿಸುವ...

... ಬಿಡಗುಗಾರ್ತಿ ಕ... ಹೋಗಲು ಬಿಡೆನು.

ಮನೋ: ...ನ್ನು ಕೊಟ್ಟಲ್ಲದೆ ...ಟಕ್ಕೆ ಇನ್ನೆತ್ತ ಹೋಗಲೊ? ನೀನೇನು ಬೇಡುತ್ತಿರುವೆ? ...ರೆಯ ...

ಮು: ಬೇ... ...ಕ್ಕೆ ತಿರುಕನೇನು? ಅದಾಗದು! ಮೆಚ್ಚನ್ನು ಕೊಟ್ಟು ಬಹುಮಾನಿಸುವುದು.

ಮನೋ: ನಾನೆಷ್ಟಾದರೂ ಪರಾಧೀನೆಯಷೆ! ನನ್ನೊಡನೆ ಇರುವುದೇನು? ಏನನ್ನು ಕೊಡಲಿ? ಎಂತು ಕೊಡಲಿ?

ಮು: ಏನೋ ಎಂತೋ! ನಾನು ಮೆಚ್ಚುವಂತು, ಕಥೆಯು ತಿರುಳು ಹೆಚ್ಚುವಂತು, ನಾಲ್ವರು ತಲೆದೂಗುವಂತು ಉಡುಗೊರೆಯನ್ನು ಕೊಟ್ಟರಾಯಿತು.

ಮನೋ: ಹಾಗಾದರೆ ಇಂತಿದು................

ಮು: ....ಭದ್ರಂ—ಶುಭಂ—ಮಂಗಳಂ.

[ಇದು ಸಂಭಾಷಣೆ ಮಾತ್ರ! ಕಥೆಯ ತಿರುಳನ್ನಪೇಕ್ಷಿಸುವವರು ಶ್ರೀ ರಾಮಾಶ್ವಮೇಧದ ಕಥೆಯನ್ನೇ ಓದುವುದೊಳ್ಳಿತು.]

ಮನೋ: [illegible]ದಲ್ಲಿರುತ್ತಿರ[illegible]ನೆ [illegible]ಾಡಿ ಬೇಡ[illegible]ವರೆ ಅದೊಂದು ಉಡುಗೊರೆಯೆ? ಮನವೊ[illegible] [illegible]ಿರಲ್ಲವೆ ಮೆಚ್ಚು!

ಮು: ಆಯಸ್ಸಾಯುಷ್ಮನು [illegible]ಡುವೆ: ಕೇಳು: ವಾಲ್ಮೀಕಿಯಾಶ್ರಮದಲ್ಲಿ ವಾಸಿಸುತಿದ್ದ ಸೀತೆಯು ತಿಂಗಳು ತುಂಬಲು ಅವಳಿ ಜವಳಿ ಮಕ್ಕಳನ್ನು ಹೆತ್ತಳು. ವಾಲ್ಮೀಕಿಯು ಆ ಮಕ್ಕಳಿಗೆ ಕುಶಲವರೆಂಬ ಹೆಸರಿಟ್ಟು, ಸಕಲ ವಿದ್ಯೆಯನ್ನೂ ಕಲಿಸಿ, ಶಸ್ತ್ರ ಶಾಸ್ತ್ರಗಳೆರಡರಲ್ಲಿಯೂ ಬುದ್ಧಿವಂತರನ್ನಾಗಿ ಮಾಡಿದನು. ಸಿಂಹದ ಮರಿ[illegible]ಲ್ಲಿದ್ದರೂ ನರಿಯಾದೀತೆ? ಬಿರುಗಾಳಿಯು ಹೊಡೆತಕ್ಕೆ ಬೇರು[illegible]ದ[illegible] ಮರಗಳಂತೆ ಕುಶಲವರ ಬಾಣಗಳಿಂದ ಶತ್ರುಘ್ನಾದಿಗಳ[illegible], ಅಳಿದುಳಿದ ಸೈನಿಕರು ಓಡಿಯೋಡಿ ಬೇ[illegible]ಮನಿಷ್ಟೆ[illegible] [illegible]ಾಮನ[illegible] [illegible]ಸಮೇತನಾಗಿ ಬಂದು [illegible] ಮಾಡುತ್ತಿರಲು, [illegible] ಬಂದು [illegible] [illegible]ಸಲು,

[illegible]ಾರ
ಗೋಕರ್ಣ
ಕುಮಟಾ
ಹೊನ್ನಾವರ
ಭಟ್ಕಳ

ಗಂಗೊಳ್ಳಿ
ಕುಂದಾಪುರ
ಉಡುಪಿ[illegible]
[illegible]
ಮಂಗಳೂರು
ಕುಂಬಳೆ
ಕಾಸರಗೋಡು

ತೆತ್ತ ಭಂ[illegible]ಾಳ ರೂ. ೨೮ ಲಕ್ಷ.
ರಕ್ಷಾ ನಿಧಿ ರೂ. ೨೨ ಲಕ್ಷ.

The Canara Industrial & Banking Syndicate Ltd., Udip

Edited, Printed & Published by K. V. Shenoy
at The Prabhat Printers Ltd., Mangalore.